# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 303
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ
ಉತ್ತರಿಸುವ ದಿನಾಂಕ : 15.02.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ 94ಸಿ ಮತ್ತು 94 ಸಿಸಿ ನಿಯಮಗಳಡಿಯಲ್ಲಿ ನೀಡಿದ ಹಕ್ಕು ಪತ್ರಗಳಷ್ಟು; ಸದರಿ ಹಕ್ಕು ಪತ್ರದ ಜಾಗಗಳನ್ನು ಕಂದಾಯ ಇಲಾಖೆಯ ಸರ್ಕಾರಿ ಜಾಗದ ಪಹಣಿ ದಾಖಲೆಯಿಂದ ತೆಗೆದು ಆಯಾಯ ಸ್ಥಳೀಯ ಪ್ರಾಧಿಕಾರಿಗಳಿಗೆ ನಿಯಮಾನುಸಾರ ಹಸ್ತಾಂತರಿಸಿ ಖಾತೆ ಇ-ಸ್ವತ್ತು, ಇ-ಖಾತೆ ಮಾಡಲಾಗಿದೆಯೇ; ಎಷ್ಟು ಹಕ್ಕು ಪತ್ರ ನೀಡಿದ ಜಾಗಗಳು ಇನ್ನೂ ಕಂದಾಯ ಇಲಾಖೆಯ ದಾಖಲೆಗಳಲ್ಲಿ ಮುಂದುವರೆದಿವೆ; ಸದರಿ ಜಾಗಗಳ ಮ್ಯುಟೇಷನ್‌ಗೆ ಸರ್ಕಾರ ಏನು ಕ್ರಮವಹಿಸಿದೆ; ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ಅನುಬಂಧದಲ್ಲಿ ನೀಡಲಾಗಿದೆ.<br><br>ಹಕ್ಕುಪತ್ರದ ಜಮೀನುಗಳನ್ನು ಕಂದಾಯ ಇಲಾಖೆಯ ಕಂದಾಯ ದಾಖಲೆಗಳಾದ ಪಹಣಿಯಲ್ಲಿ ತೆಗೆದು ಸಂಬಂಧಪಟ್ಟ ಸ್ಥಳಿಯ ಇಲಾಖೆ/ ಪ್ರಾಧಿಕಾರಗಳಿಗೆ ನಿಯಮಾನುಸಾರ ಹಸ್ತಾಂತರಿಸಿ ಖಾತೆ, ಈ-ಸ್ವತ್ತು, ಈ-ಖಾತೆ ಕಾರ್ಯವು ಪ್ರಗತಿಯಲ್ಲಿರುತ್ತದೆ. |
| ಆ) | ಕರ್ನಾಟಕ ರಾಜ್ಯದಲ್ಲಿ 94ಸಿ ಮತ್ತು 94 ಸಿಸಿ ಹಕ್ಕು ಪತ್ರ ನೀಡಿದ ಫಲಾನುಭವಿಗಳಿಗೆ ಸುತ್ತೋಲೆ ಸಂಖ್ಯೆ:ಕಂಇ:13: ಎಲ್.ಜಿ.ಪಿ.2019, ದಿನ10-07-2019 ರಂತೆ ಕ್ರಮವಹಿಸಲಾಗಿದೆಯೇ; ಕ್ರಮವಹಿಸದಿದ್ದಲ್ಲಿ ಕಾರಣಗಳೇನು; (ವಿವರ ನೀಡುವುದು) ಕಛೇರಿಯಲ್ಲಿ ಲಭ್ಯವಿದೆಯೇ; ಇದ್ದಲ್ಲಿ ನೀಡುವುದು; | ಹೌದು |
| ಇ) | ಹಕ್ಕು ಪತ್ರದ ಮೂಲಕ ನೀಡಿದ ಮನೆ ನಿವೇಶನದ ಷರತ್ತುಗಳೇನು ಮತ್ತು ಅದರ ಊರ್ಜಿತವಾಧಿ ಎಷ್ಟು ಸದರಿ ಹಕ್ಕು ಪತ್ರದ ಷರತ್ತುಗಳ ಊರ್ಜಿತಾವಧಿ ಮುಗಿದ ನಂತರ ಸದರಿ ಷರತ್ತು ನಿವೇಶನ/ಕಟ್ಟಡವನ್ನು ವಾಸ್ತವೇತರ ಬಳಕೆ ಮಾಡಬಹುದೆ; ಹಲವು ಹಕ್ಕುಪತ್ರ ನಿವೇಶನಗಳನ್ನು ಊರ್ಜಿತಾವಧಿಯೊಳಗೆ ವಾಸ್ತವೇತರ ಉದ್ದೇಶಕ್ಕಾಗಿ ಭಾಗಶಃ ಅಥವಾ ಪೂರ್ಣವಾಗಿ ಬಳಸುತ್ತಿರುವ ಮತ್ತು ಪರಭಾರೆ ಮಾಡುವ ಬಗ್ಗೆ ಸರ್ಕಾರ ಏನಾದರೂ ಕ್ರಮ ಜರುಗಿಸಿದೆಯೇ ಅಥವಾ ನಿಯಂತ್ರಣ ಹೊಂದಿದೆಯೇ; (ವಿವರ ಒದಗಿಸುವುದು) | ಹಕ್ಕು ಪತ್ರದ ಮೂಲಕ ನೀಡಿದ ಮನೆ ನಿವೇಶನದ ಷರತ್ತುಗಳು;<br>• ಮಂಜೂರಾದಾರರು ಮಂಜೂರಾದ 25 ವರ್ಷಗಳು ಅವಧಿಯವರೆವಿಗೂ ಬೇರೆ ಯಾರಿಗೂ ಪರಭಾರೆ ಮಾಡಬಾರದು ಹಾಗೂ ಹಕ್ಕನ್ನು ವರ್ಗಾಯಿಸಕೂಡದು.<br>• ಯಾರೇ ವ್ಯಕ್ತಿಯು ತನ್ನ ಹೆಸರಿನಲ್ಲಿ ಅಥವಾ ಕುಟುಂಬಸ್ಥರ ಹೆಸರಿನಲ್ಲಿ ಒಂದಕ್ಕಿಂತರ ಹೆಚ್ಚಿನ ಮನೆ/ನಿವೇಶನ ಹೊಂದಿದಲ್ಲಿ ಮಂಜೂರಾತಿಗೆ ಅರ್ಹರಲ್ಲ.<br>• ಮಂಜೂರಾತಿ ಪಡೆದ ವ್ಯಕ್ತಿಯ ಕಟ್ಟಡವನ್ನು ವಾಸದ ಮನೆಯಾಗಿ ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದಲ್ಲ. ಹಾಗೆ ಮಾಡಿದ್ದಲ್ಲಿ ಮಂಜೂರಾತಿ/ಆದೇಶವನ್ನು ರದ್ದುಪಡಿಸಿ ಸರ್ಕಾರದ ವಶಕ್ಕೆ ಪಡೆದುಕೊಳ್ಳಾಗುವುದು.<br>• ಸದರಿ ಮನೆಯನ್ನು ಬೇರೆಯವರಿಗೆ ಬಾಡಿಗೆ ನೀಡದೇ ಸ್ವಯಂ ಉಪಯೋಗಿಸತಕ್ಕದ್ದು ಇಟ್ಟುಕೊಳ್ಳತಕ್ಕದ್ದು.<br>• ಸರ್ಕಾರ ಅಥವಾ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ವಿಧಿಸುವ ತೆರಿಗೆಗಳನ್ನು |

| | | |
|---|---|---|
| | | ನಿಯಮಾನುಸಾರ ಪಾವತಿ ಮಾಡುವ ಹಾಗೂ ಚಾಲ್ತಿಯಲ್ಲಿರುವ ನಿಯಮಗಳನ್ನು ಪಾಲಿಸುವುದು.<br>• ಸರ್ಕಾರದ ಆದೇಶದಲ್ಲಿ ನಮೂದಿಸಿರುವ ಅಂಶಗಳಿಗೆ ವಿರುದ್ಧವಾಗಿ ತಪ್ಪು ಮಾಹಿತಿ ನೀಡಿ ಸಕ್ರಮ ಪಡೆದಿದ್ದಲ್ಲಿ, ಅಂತಹ ಸಕ್ರಮವನ್ನು ಕರ್ನಾಟಕ ಭೂ ಮಂಜೂರಾತಿ ನಿಯಮ 1969ರ ನಿಯಮ 5ರಂತೆ ರದ್ದುಪಡಿಸಿ ಸರ್ಕಾರದ ವಶಕ್ಕೆ ವಾಪಸ್ಸು ಪಡೆಯಲಾಗುವುದು.<br><br>ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿ ಮಂಜೂರಾದ ಹಕ್ಕುಪತ್ರಗಳನ್ನು ಸರ್ಕಾರದ ಹಾಕಿಕೊಳ್ಳಲಾಗುವುದು. ವತಿಯಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. |
| ಈ) | ಸರ್ಕಾರಿ ಜಾಗದಲ್ಲಿ ಅಕ್ರಮ ಸಕ್ರಮದ ಮೂಲಕ ಕೃಷಿ ಮಾಡಲು ಮಂಜೂರಾದ ಜಾಗಗಳನ್ನು ಭೂ ಪರಿವರ್ತನೆ ಮಾಡಿ ನಿವೇಶನಗಳಾಗಿ ಮಾರುತ್ತಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ? | ಸರಕಾರಿ ಜಮೀನಿನ ನಮೂನೆ 50 ನಮೂನೆ 53 ಮತ್ತು ನಮೂನೆ-57 ಯೋಜನೆಯಡಿ ಮಂಜೂರಾದ ಪ್ರಕರಣಗಳಿಗೆ ಸಂಬಂಧಿಸಿದ ಷರತ್ತು ಮುಕ್ತಾಯವಾದ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಹೊರತು ಪಡಿಸಿ ಭೂ ಪರಿವರ್ತನೆ ಮಾಡಲು ಅವಕಾಶ ಇರುತ್ತದೆ.<br><br>ಕೃಷಿ ಜಮೀನುಗಳನ್ನು ಕೃಷಿಯೇತರ ಉದ್ದೇಶಗಳಿಗೆ ಭೂ ಪರಿವರ್ತನೆ ಮಾಡಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95ರಲ್ಲಿ ಅವಕಾಶ ಕಲ್ಪಿಸಲಾಗಿದೆ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರಾದ ಪ್ರಕರಣಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ ಆರ್.ಡಿ 06 ಎಲ್.ಜಿ.ಪಿ 2022 ದಿನಾಂಕ: 05/11/2022 ರಂತೆ 10 ಸೆಂಟ್ಸ್ ರವರೆಗೆ ಜಿಲ್ಲಾಧಿಕಾರಿಗಳ ಹಂತದಲ್ಲಿ ಭೂ ಪರಿವರ್ತನೆ ಮಾಡಲು ಅವಕಾಶ ಇರುತ್ತದೆ. |

ಸಂಖ್ಯೆ: ಆರ್‌ಡಿ 25 ಎಲ್‌ಜಿಕ್ಯೂ 2023

(ಡಾ. ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಅನುಬಂಧ ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ 94ಸಿ ಮತ್ತು 94 ಸಿಸಿ ನಿಯಮಗಳಡಿಯಲ್ಲಿ ನೀಡಿದ ಹಕ್ಕು

| ಕ್ರ.ಸಂ | ಜಿಲ್ಲೆ | 94ಸಿ ರಡಿ ವಿತರಿಸಲಾದ ಹಕ್ಕುಪತ್ರಗಳ ವಿವರ | 94ಸಿಸಿ ರಡಿ ವಿತರಿಸಲಾದ ಹಕ್ಕುಪತ್ರಗಳ ವಿವರ |
|---|---|---|---|
| 1 | ಬೆಂಗಳೂರು ನಗರ | 1131 | 17593 |
| 2 | ಬೆಂಗಳೂರು ಗ್ರಾಮಾಂತರ | 2093 | 3362 |
| 3 | ಚಿಕ್ಕಬಳ್ಳಾಪುರ | 3367 | 246 |
| 4 | ಚಿತ್ರದುರ್ಗ | 2967 | 1592 |
| 5 | ತುಮಕೂರು | 3221 | 1268 |
| 6 | ಕೋಲಾರ | 512 | 1010 |
| 7 | ಬೆಂಗಳೂರು ದಕ್ಷಿಣ | 1601 | 349 |
| 8 | ದಾವಣಗೆರೆ | 3419 | 0 |
| 9 | ಶಿವಮೊಗ್ಗ | 5076 | 17303 |
| 10 | ಚಾಮರಾಜನಗರ | 340 | 0 |
| 11 | ಚಿಕ್ಕಮಗಳೂರು | 19238 | 223 |
| 12 | ದಕ್ಷಿಣ ಕನ್ನಡ | 53661 | 26659 |
| 13 | ಹಾಸನ | 13057 | 153 |
| 14 | ಮಂಡ್ಯ | 615 | 10 |
| 15 | ಮೈಸೂರು | 1341 | 66 |
| 16 | ಕೊಡಗು | 5936 | 1007 |
| 17 | ಉಡುಪಿ | 8557 | 2311 |
| 18 | ಕೊಪ್ಪಳ | 686 | 243 |
| 19 | ಬಳ್ಳಾರಿ | 2077 | 4320 |
| 20 | ಬೀದರ್ | 4812 | 11 |
| 21 | ಕಲಬುರಗಿ | 4144 | 34 |
| 22 | ರಾಯಚೂರು | 1257 | 169 |
| 23 | ಯಾದಗಿರಿ | 237 | 88 |
| 24 | ವಿಜಯನಗರ | 631 | 4 |
| 25 | ಬೆಳಗಾವಿ | 707 | 0 |
| 26 | ಬಾಗಲಕೋಟೆ | 4568 | 2386 |
| 27 | ವಿಜಯಪುರ | 276 | 16 |
| 28 | ಧಾರವಾಡ | 1809 | 94 |
| 29 | ಗದಗ | 214 | 118 |
| 30 | ಹಾವೇರಿ | 237 | 140 |
| 31 | ಉತ್ತರ ಕನ್ನಡ | 2170 | 1540 |
| | ಒಟ್ಟು:- | 149957 | 82315 |

| ಹಕ್ಕು ಪತ್ರಗಳ ವಿವರ |
| --- |
| ಒಟ್ಟು |
| 18724 |
| 5455 |
| 3613 |
| 4559 |
| 4489 |
| 1522 |
| 1950 |
| 3419 |
| 22379 |
| 340 |
| **19461** |
| 80320 |
| **13210** |
| **625** |
| **1407** |
| **6943** |
| 10686 |
| 929 |
| 6397 |
| 4823 |
| 4178 |
| 1426 |
| 325 |
| 635 |
| 707 |
| 6954 |
| 292 |
| 1903 |
| 332 |
| 377 |
| 3710 |
| 232272 |